ಒಂದು ಬಲವಂತದಿಂದ, ಒತ್ತಡದಿಂದ ಈ ರಾಜಕೀಯ ಮಾಡುತ್ತಿದ್ದಾನೆ, ತಾವು ವಾಸ್ತವಿಕತೆಯನ್ನು ಅರ್ಥ ಮಾಡಿಕೊಳ್ಳಬೇಕು. ಈಗ ಅದನ್ನು ಸಕ್ರಮಗೊಳಿಸಲಿಲ್ಲವೆಂದರೆ, ಅಲ್ಲಿ ವಾಸ ಮಾಡತಕ್ಕಂಥವರಿಗೆ ಸರ್ಕಾರದಿಂದ ಅನ್ಯಾಯ ಮಾಡಿದಂತಾಗುತ್ತದೆ, ಈ ಸಕ್ರಮದ ಕೆಲಸವನ್ನು ಯಾವಾಗ ಮಾಡಿ ಮುಗಿಸುತ್ತೀರಿ? ತಕ್ಷಣದಲ್ಲಿ ಈ ಕ್ರಮ ಜರುಗಿಸಬೇಕು, ಇಲ್ಲದಿದ್ದರೆ ಮತ್ತೆ ಅವನು ಅಲ್ಲಿ ಪ್ರಭಾವ ಬೀರುತ್ತಾನೆ.

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ ; ಮಹಾನಗರಪಾಲಿಕೆಯವರು ಸಕ್ರಮ ಮಾಡಿ ಮುಗಿಸುತ್ತೇವೆಂದು ಹೇಳುವ ಮಾಹಿತಿ ಬರೀ ಸುಳ್ಳು; ಸತ್ಯಕ್ಕೆ ದೂರವಾದುದು, ಅವರು ಪ್ರಾಮಾಣಿಕವಾದ ಅಂಶವನ್ನು ಕೊಟ್ಟಿಲ್ಲ, ಅದಕ್ಕೆ ಒಂದು ಸಮಿತಿ ರಚನೆ ಮಾಡುತ್ತೇವೆನ್ನುವುದನ್ನು ಹೇಳಬೇಕು, ನೀವು ಅಧಿಕಾರಿಗಳಿಗೆ ಆದೇಶ ನೀಡಿ ಈ ಸಕ್ರಮ ಕಾರ್ಯವನ್ನು ತುರ್ತಾಗಿ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಇ. ಮಾರುತಿರಾವ್ ಪವಾರ್ : ಇದಕ್ಕೆ ಸಮಯ ಕೊಡಬೇಡಿ. ತಕ್ಷಣ ಸಕ್ರಮ ಮಾಡಿ.

ಶ್ರೀ ಅನಂತನಾಗ್ : ಸಂಬಂಧಪಟ್ಟಂಥ ಮಂತ್ರಿಗಳು ಇವತ್ತು ಬಂದಿಲ್ಲ, ಅವರು ಈ ಉತ್ತರವನ್ನು ಕೊಟ್ಟಿದ್ದಾರೆ. ಆದರೂ ಇದರ ಬಗ್ಗೆ ನಾನು ವಿಚಾರಣೆ ಮಾಡಿ ತಮಗೆ ತಿಳಿಸುತ್ತೇನೆ.

ಕುಂದಾಪುರಕ್ಕೆ ಕುಡಿಯುವ ನೀರು ಮತ್ತು ಒಳಚರಂಡಿ ಯೋಜನೆ

169 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಕುಂದಾಪುರ ಪುರಸಭೆಗೆ ಕುಡಿಯುವ ನೀರಿನ ಮತ್ತು ಒಳಚರಂಡಿ ಯೋಜನೆಗಳಿಗೆ ಮಂಜೂರಾತಿ ಮಾಡಲಾಗಿದೆಯೆ?*

2. *ಸದರಿ ಯೋಜನೆಗೆ ವಿಶ್ವಬ್ಯಾಂಕ್ ಹಾಗೂ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಸಾಲ ಪಡೆಯಲಾಗಿದೆಯೇ? ಪಡೆಯಲಾಗಿದ್ದಲ್ಲಿ ಮೊತ್ತವೆಷ್ಟು?*

ಶ್ರೀ ಬಿ.ಎನ್ ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ಇಲ್ಲ. ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ವೆಸ್ಟ್‌ಕೋಸ್ಟ್ ಅಭಿವೃದ್ಧಿ ಯೋಜನೆಯಡಿ ಸಾಲ ಪಡೆಯಲು ಪ್ರಸ್ತಾವನೆಗಳನ್ನು ತಯಾರಿಸಲಾಗುತ್ತಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಕೊಟ್ಟಿರುವ ಉತ್ತರಕ್ಕೆ ಪ್ರಥಮವಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಎಲ್ಲಾ ಕಡೆ 'ಇಲ್ಲ' ಇಲ್ಲವೆಂದು ಕೊಟ್ಟಿದ್ದೀರಿ. ಕುಂದಾಪುರ ಪುರಸಭೆಯ ಕುಡಿಯುವ ನೀರಿನ ಮತ್ತು ಒಳಚರಂಡಿ ಯೋಜನೆ ಮಂಜೂರು ಮಾಡಿದೆಯೇ ಎಂದು ಕೇಳಿದರೆ ಇಲ್ಲವೆಂದು ಹೇಳಿದ್ದೀರಿ, ಸದರಿ ಯೋಜನೆಗೆ ವಿಶ್ವಬ್ಯಾಂಕ್ ಮತ್ತು ಏಷ್ಯನ್ ಡೆವಲಪ್‌ಮೆಂಟ್

ಬ್ಯಾಂಕ್‌ನಿಂದ ಸಾಲ ಪಡೆಯಲಾಗಿದೆಯೇ ಎಂದು ಕೇಳಿದರೆ ಇಲ್ಲವೆಂದು ಹೇಳಿದ್ದೀರಿ, ಉತ್ತರದಲ್ಲಿ ಎಲ್ಲಾ ಇಲ್ಲವೆಂದು ಕೊಟ್ಟಿದ್ದೀರಿ. ಇದನ್ನು ಏತಕ್ಕೆ ಕೇಳುತ್ತಿದ್ದೇನೆಂದರೆ, ತಾವು ಮೂರನೆ ಮಹಡಿಯಲ್ಲಿ ಎಲ್ಲಾ ಶಾಸಕರ ಒಂದು ಸಭೆಯನ್ನು ಕರೆದಿದ್ದಾಗ ಆ ದಿವಸ ನಾವೂ ಕೂಡ ಒಂದು ಮನವಿಯನ್ನು ತಮಗೆ ಕೊಟ್ಟಿದ್ದೇವೆ, ಆಗ ಮಂಜೂರು ಮಾಡುತ್ತೇವೆನ್ನುವ ಭರವಸೆಯನ್ನು ಕೊಟ್ಟು ಇಲ್ಲಿ ಕೊಟ್ಟಿಲ್ಲವೆನ್ನುವ ಸತ್ಯವನ್ನು ಹೇಳಿದ್ದೀರಿ ಅದಕ್ಕೆ ನನ್ನದೇನೂ ಆಕ್ಷೇಪವಿಲ್ಲ. ಆದರೆ ಒಂದು ವಿಚಾರವನ್ನು ಸನ್ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಕುಂದಾಪುರ ಪುರಸಭೆಯ ಒಂದು ಕಡೆ ಸಮುದ್ರವಿದೆ, ಎರಡು ಕಡೆ ಹೊಳೆ ಇರುತ್ತದೆ, ಬಹಳಷ್ಟು ನೀರು ಕಾಣಿಸುತ್ತದೆ, ಕುಡಿಯುವುದಕ್ಕಾಗುವುದಿಲ್ಲ; ಅದು ನಮ್ಮ ದುರಾದೃಷ್ಟವಶಾತ್ ತಮಗೆ ಅರ್ಥವಾಗುತ್ತಿಲ್ಲ. ನೀವು ಹೇಳಿದ್ದುದು ನಮಗೆ ಅರ್ಥವಾಗುತ್ತದೆ, ನಾವು ಹೇಳಿದ್ದು ನಿಮಗೆ ಅರ್ಥವಾಗುವುದಿಲ್ಲ. ಆದುದರಿಂದ ಇದನ್ನು ಯಾವ ರೀತಿಯಲ್ಲಿ ಬಗೆಹರಿಸುತ್ತೀರಿ? ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಅಂದಾಜುಪಟ್ಟಿಯನ್ನು ತಯಾರು ಮಾಡಲು ಐವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಮರಿಜೂರು ಮಾಡುವುದಕ್ಕೆ ಹತ್ತು ವರ್ಷಬೇಕಾಗುತ್ತದೆ. ಬಹುಶಃ ಹಿಂದಿನ ಸರ್ಕಾರದಲ್ಲೂ ಒತ್ತಾಯ ಮಾಡಿದ್ದೇನೆ, ಈಗಿನ ಸರ್ಕಾರದಲ್ಲೂ ಕೂಡ ಒತ್ತಾಯ ಮಾಡುತ್ತಿದ್ದೇನೆ.

12.30 ಪಿ.ಎಂ.

ಕುಂದಾಪುರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಯಾವಾಗ ಮಂಜೂರು ಮಾಡಿ ಕೊಡುತ್ತೀರಿ ಎನ್ನುವುದನ್ನು ಈ ಸದನದಲ್ಲಾದರೂ ಸ್ಪಷ್ಟವಾಗಿ ಹೇಳಿ ಎಂದು ಕೇಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಕುಂದಾಪುರ ಪಟ್ಟಣಕ್ಕೆ ನೀರನ್ನು ತೆರೆದ ಬಾವಿಗಳು ಮತ್ತು ಕೊಳವೆ ಬಾವಿಗಳ ಮೂಲಕ ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಅಲ್ಲಿಗೆ ನದಿಯಿಂದ ನೀರನ್ನು ಕೊಡಬೇಕು ಎಂದು ಕೇಳಿದ್ದಾರೆ. ವರಾಹಿ ನದಿಯಿಂದ 22 ಕಿ.ಮೀ. ದೂರದಿಂದ ನೀರನ್ನು ಕೊಡುವಂಥ ಯೋಜನೆ ಇದು. ಈ ಯೋಜನೆಯನ್ನು ತಾಂತ್ರಿಕವಾಗಿ ಎಲ್ಲಾ ಸಿದ್ಧಮಾಡಿದ್ದೇವೆ. ಮಂಗಳೂರಿನಲ್ಲಿ ಇರತಕ್ಕಂಥ ಒಟ್ಟು ವೆಸ್ಟ್ ಕೋಸ್ಟ್ ಪ್ರಾಜೆಕ್ಟ್‌ಗೆ ಕನ್ಸಲ್ಟೆನ್ಸಿಗಾಗಿ 27 ಲಕ್ಷ ರೂಪಾಯಿ -ಗಳನ್ನು ಯೋಜನೆಯನ್ನು ತಯಾರು ಮಾಡಲು ತುಂಬಿದ್ದೇವೆ. ಮಂಗಳೂರಿನಲ್ಲಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕಿನ ಕಛೇರಿಯನ್ನೂ ತೆರೆಯಲಾಗಿದೆ. ಅದರಲ್ಲಿ ಕರಾವಳಿ ಪ್ರದೇಶದಲ್ಲಿ ಬರತಕ್ಕಂಥ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ 20 ತಾಲ್ಲೂಕು ಮತ್ತು ಪಟ್ಟಣಗಳನ್ನು ಆಯ್ಕೆ ಮಾಡಿಕೊಂಡು 150 ರಿಂದ 200 ಕೋಟಿ ರೂಪಾಯಿಗಳ ಯೋಜನೆಯನ್ನು ಸಿದ್ಧಮಾಡಿದ್ದೇವೆ. ಎಡಿಬಿ ಯೋಜನೆ ಬಂದಿರುವುದರಿಂದ ಮತ್ತು ಈಗಾಗಲೇ ನಾವು 27 ಲಕ್ಷ ರೂಪಾಯಿ ಹಣವನ್ನೂ ತುಂಬಿರುವುದರಿಂದ, ಮಾನ್ಯ ಸದಸ್ಯರು ಈ ಯೋಜನೆ ಆಗುವುದಿಲ್ಲ ಎನ್ನುವುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬಾರದು. ಈ ಯೋಜನೆ ಆಗುತ್ತದೆ ಆದರೆ ಸ್ವಲ್ಪ ತಡವಾಗುತ್ತದೆ. ಹಣವನ್ನು ತುಂಬಿ, ವರಾಹಿ ನದಿಯಿಂದ ನೀರು ಕೊಡುವಂಥ ಕಾರ್ಯವನ್ನು ಸಿದ್ಧಪಡಿಸಿ ಮಾಡಿಕೊಡುತ್ತೇವೆ. ವೆಸ್ಟ್ ಕೋಸ್ಟ್ ಪ್ರಾಜೆಕ್ಟ್ ಎನ್ನುವುದು ಬೃಹತ್ ಯೋಜನೆಯಾಗಿದ್ದು ಆದರಲ್ಲಿ

ಎಲ್ಲವನ್ನೂ ಸೇರಿಸಿಕೊಂಡಿದ್ದಾರೆ. ಆ ಯೋಜನೆಯ ಕಾರ್ಯಕ್ರಮಗಳಲ್ಲಿ ನಗರಕ್ಕೆ ನೀರು ಕೊಡುವ ಯೋಜನೆಯೂ ಒಂದು ಕಾರ್ಯಕ್ರಮವಾಗಿದೆ. ಆದ್ದರಿಂದ ಇದನ್ನು ಮಾಡಿಕೊಡುತ್ತೇವೆ ಮತ್ತು ಸದಸ್ಯರು ಬಂದಾಗ ಏನೇನು ಮಾಡಿದ್ದೇವೆ ಎನ್ನುವ ವಿವರವನ್ನೂ ಅವರಿಗೆ ತಿಳಿಸುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ನಾನು ಸಚಿವರನ್ನು ಕೇಳುವುದು ಇಷ್ಟೇ. ಕಳೆದ ಅಧಿವೇಶನದಲ್ಲಿ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಕುಂದಾಪುರವನ್ನು ಕೈಬಿಟ್ಟಿರುವುದು ಸ್ಪಷ್ಟವಾಗಿ ಗೊತ್ತಾಗಿದೆ. ಭಟ್ಕಳ, ಉಡುಪಿ ಮತ್ತು ಸಿರ್ಸಿಗಳು ಸೇರಿವೆ. ಆದರೆ ಕುಂದಾಪುರವನ್ನು ಕೈಬಿಡಲಾಗಿದೆ. ಮುಖ್ಯವಾಗಿ ನಾವು ನೀರನ್ನು ವರಾಹಿಯಿಂದ ತನ್ನಿ, ಅಲ್ಲಿಂದ ತನ್ನಿ, ಇಲ್ಲಿಂದ ತನ್ನಿ ಎಂದು ವಾದ ಮಾಡುವುದಿಲ್ಲ. ಒಟ್ಟಿನಲ್ಲಿ ನಮಗೆ ಕುಡಿಯಲು ನೀರು ಬೇಕು. ವರಾಹಿ ಎಲ್ಲಿದೆ ಅಲ್ಲಿಗೆ ಹೋಗಿ ನೀರನ್ನು ತರಬೇಕು ಎನ್ನುವುದಲ್ಲ. ನೀವು ಇದನ್ನು ಪರಿಶೀಲನೆ ಮಾಡಿ. ಅಂದಾಜು ಪಟ್ಟಿಯನ್ನು ತಯಾರು ಮಾಡಲು ಎಷ್ಟು ಖರ್ಚು ಮಾಡಿದ್ದಾರೆ? ಇಷ್ಟು ಖರ್ಚಿನ ಅವಶ್ಯಕತೆ ಇತ್ತೇ? ಅದನ್ನು ಅತೀ ಹತ್ತಿರದಲ್ಲೇ ತಂದರೆ, ಕುಡಿಯುವ ನೀರಿನ ಸೋರ್ಸಸ್ ಅನ್ನು ತಯಾರು ಮಾಡಿದರೆ ಅದರಿಂದ ನಿಮಗೆ ಕಡಿಮೆ ಖರ್ಚು ಬರುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಕುಂದಾಪುರಕ್ಕೆ ತೋರಿಸಿರತಕ್ಕಂಥಾದ್ದು ಆರೂವರೆ ಕೋಟಿ ರೂಪಾಯಿಯ ಯೋಜನೆ. ಇಡೀ ಕರಾವಳಿ ಪ್ರದೇಶದಲ್ಲಿ ಬರತಕ್ಕಂಥ ತಾಲ್ಲೂಕು ಮತ್ತು ಪಟ್ಟಣಗಳಿಗೆ 150 ರಿಂದ 200 ಕೋಟಿ ರೂಪಾಯಿಗಳ ಯೋಜನೆಗೆ ನಾವು ಕನ್ಸಲ್ಟೆನ್ಸಿ ಫೀಸ್ ಎಂದು 27 ಲಕ್ಷ ರೂಪಾಯಿಗಳನ್ನು ತುಂಬಿದ್ದೇವೆ. ಎ.ಡಿ.ಬಿ.ಯವರು ಮಂಗಳೂರಿನಲ್ಲಿ ಕಛೇರಿಯನ್ನೂ ತೆರೆದಿದ್ದಾರೆ. ಇವು ಅದರ ಮೂಲಕ ಆಗುವ ಕಾರ್ಯಗಳು ಎಂದು ಮಾನ್ಯ ಸದಸ್ಯರಿಗೆ ತಿಳಿಸಿದ್ದೆವು. ಇನ್ನು ಒಳಚರಂಡಿ ಬಗ್ಗೆ ಕೇಳಿದ್ದಾರೆ. ನೂರು ಲೀಟರ್ ನೀರು ಇಲ್ಲದಿದ್ದರೆ ಒಳಚರಂಡಿ ಮಾಡುವುದು ಸೂಕ್ತವಲ್ಲ. ಅಲ್ಲಿಗೆ ನೀರನ್ನು ಕೊಟ್ಟಾದ ಮೇಲೆ ಒಳಚರಂಡಿ ಯೋಜನೆಯನ್ನು ತೆಗೆದುಕೊಳ್ಳುತ್ತೇವೆ. ಜೊತೆಗೆ ಅವರು ವರಾಹಿಯಿಂದ ಬೇಡ, ನೀರು ಹತ್ತಿರದಲ್ಲೇ ಇದೆ ಎಂದು ಸೂಚಿಸುವುದಾದರೆ, ಇನ್ನೂ ಕಡಿಮೆ ಖರ್ಚಿನಲ್ಲಿ ಇದು ಆಗುತ್ತದೆ ಎನ್ನುವುದಾದರೆ ನಾನು ಅವರ ಹತ್ತಿರ ಮಾತನಾಡಿ ಆ ಕಾರ್ಯವನ್ನು ಮಾಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಒಳಚರಂಡಿ ಬಗ್ಗೆ ತಾವು ಹೇಳಿದಿರಿ. ಒಳಚರಂಡಿ ಯೋಜನೆಯನ್ನು ಮಾಡಲು ಕುಡಿಯುವ ನೀರಿನ ಪ್ರಮಾಣ ಇಂತಿಷ್ಟು ಹೋಗಬೇಕು ಎಂದು ಹೇಳಿದಿರಿ. ಇದಕ್ಕೆ ನೀವು ನೀರಿನ ಪ್ರಮಾಣವನ್ನು ಯಾವ ಗೇಜ್‌ನಲ್ಲಿ ಮಾಡುತ್ತೀರಿ?

ಉಪಾಧ್ಯಕ್ಷರು : ಅವರು ಏನು ಹೇಳುತ್ತಾರೆ ಎನ್ನುವುದನ್ನು ನೀವು ತಿಳಿದುಕೊಳ್ಳಲಿಲ್ಲ ಎಂದರೆ ಹೇಗೆ? ಕುಡಿಯುವ ನೀರಿನ ಯೋಜನೆಯಾಗದೆ, ಒಳಚರಂಡಿ ಯೋಜನೆಯನ್ನು ಮಾಡಲು ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಾನು ತಮ್ಮ ಹತ್ತಿರ ಕೇಳುತ್ತೇನೆ, ತಮಗೆ ಅರ್ಥವಾದರೆ ನನಗೆ ಹೇಳಿ. ನೀವು ನೀರಿನ ಪ್ರಮಾಣವನ್ನು ನೋಡಲು ಯಾವ ಗೇಜ್ ಉಪಯೋಗಿಸುತ್ತೀರಿ?

ನಿಮ್ಮಲ್ಲಿರತಕ್ಕಂಥ ಓವರ್‌ಹೆಡ್ ಟ್ಯಾಂಕ್‌ಗಳ ಸಂಖ್ಯೆಗಳನ್ನೇ ಅಥವಾ ಜನರು ಉಪಯೋಗಿಸುವಂಥ ಬಾವಿಗಳ ಮೂಲವನ್ನು ಗುರುತಿಸಲಾಗಿದೆಯೇ? ಸಾಮಾನ್ಯವಾಗಿ ನೀವು ಗುರುತಿಸುವುದು ನಮ್ಮಲ್ಲಿರತಕ್ಕಂಥ ಓವರ್‌ಹೆಡ್‌ನ ಟ್ಯಾಂಕ್‌ನ ನೀರಿನ ಪ್ರಮಾಣ, ಓವರ್‌ಹೆಡ್ ಟ್ಯಾಂಕ್‌ಗೆ ಎಷ್ಟು ಹೋಗುತ್ತದೆ, ಮೋಟಾರ್‌ನಿಂದ ಎಷ್ಟು ನೀರು ಬರುತ್ತದೆ ಎನ್ನುವ ಪ್ರಮಾಣವನ್ನು ಮಾತ್ರ ತಾವು ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರಿ. ಆದರೆ ಮನೆಮನೆಗಳಲ್ಲಿರತಕ್ಕಂಥ ಬಾವಿಗಳನ್ನು ಮತ್ತು ಅದರಿಂದ ಉಪಯೋಗಿಸತಕ್ಕಂಥ ನೀರಿನ ಪ್ರಮಾಣವನ್ನು ತಾವು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅದರಿಂದಾಗಿ ಒಳಚರಂಡಿ ಯೋಜನೆಯನ್ನು ಕಾರ್ಯಗತಮಾಡಲು ಸಾಧ್ಯವಾಗದೇ ಇರಬಹುದು. ಇದನ್ನು ಸಹ ತಾವು ಪರಿಗಣಿಸಬೇಕಾಗುತ್ತದೆ. ಇನ್ನೊಂದು ವಿಷಯವೆಂದರೆ ಪುರಸಭೆಯವರು ಒಳಚರಂಡಿ ಯೋಜನೆಗೆ ಹಂತಹಂತವಾಗಿ ಸಾರ್ವಜನಿಕರ ಹಣವನ್ನು ಉಪಯೋಗಿಸಿ ಮಾಡುತ್ತಿದ್ದಾರೆ. ನೀವು ಹೇಳಿದಂತೆ ವಾದ ಮಾಡುವುದಾದರೆ, ಅವರು ಇದನ್ನು ಮಾಡುವ ಹಾಗಿಲ್ಲ. ಅವರು ಇದನ್ನು ಮಾಡುವುದಾದರೆ, ನೀವೂ ಮಾಡಲು ಸಾಧ್ಯವಿದೆ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಅಲ್ಲಿ ಜನಸಂಖ್ಯೆ ಇರತಕ್ಕಂಥಾದ್ದು 33 ಸಾವಿರ ಮಾತ್ರ. 45 ಸಾವಿರ ಜನಸಂಖ್ಯೆಗೆ ಅನುಗುಣವಾಗಿ ಈ ಯೋಜನೆಯನ್ನು ಸಿದ್ಧಮಾಡಿರುವುದು. 25 ವರ್ಷಗಳನ್ನು ಗಣನೆಗೆ ತೆಗೆದುಕೊಂಡು 2027 ಇಸವಿ ಎಂದು ಈ ಯೋಜನೆಯನ್ನು ಸಿದ್ಧಪಡಿಸುತ್ತಿದ್ದೇವೆ. LPCD water supply is 30 Hrs. per capita ಎಂದು ಒಟ್ಟು ಜನಸಂಖ್ಯೆಯ ಆಧಾರದ ಮೇಲೆ ಸಪ್ಲೈ ಮಾಡುತ್ತೇವೆ. ಆದರಲ್ಲಿ 30 ಲೀಟರ್ಸ್ ಕೊಡುತ್ತಿದ್ದೇವೆ. ನಾವು ನ್ಯಾಷನಲ್ ಆ್ಯವರೇಜ್ ಕೊಡಬೇಕಾದುದು 100 ಲೀಟರ್ಸ್ ಪರ್‌ಕ್ಯಾಪಿಟಾ. ಅದು ಆಗುವವರೆಗೆ ಸೂವೇಜ್ ಮೂವ್ ಆಗುವುದಿಲ್ಲ, ಬ್ಲಾಕ್ ಆಗಿ ತೊಂದರೆಯಾಗುತ್ತದೆ. ಆದ್ದರಿಂದ ವರಾಹಿ ಅಥವಾ ಬೇರೆ ನದಿ ಮೂಲದಿಂದ ನೀರು ಸರಬರಾಜು ವ್ಯವಸ್ಥೆ ಆಗುವವರೆಗೆ ಒಳಚರಂಡಿ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, unless we increase the capacity of LPCD of water.

ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಭಿವೃದ್ಧಿ ಶುಲ್ಕ ಸಂದಾಯ ಪದ್ಧತಿಯ ಸರಳೀಕರಣ

172 - ಶ್ರೀ ಎನ್. ರಾಜಣ್ಣ (ಭಾರತಿನಗರ) ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆ ತನ್ನ ವ್ಯಾಪ್ತಿಗೆ ಹೊಸದಾಗಿ ಎಷ್ಟು ಪ್ರದೇಶಗಳನ್ನು ಸೇರಿಸಿಕೊಂಡಿದೆ?

ಆ) ಈ ಪ್ರದೇಶಗಳಲ್ಲಿ ಬರುವ ರೆವಿನ್ಯೂ ನಿವೇಶನಗಳು ಹಾಗೂ ಮನೆಗಳೆಷ್ಟು?

ಇ) ಬೆಂಗಳೂರು ಮಹಾನಗರ ಪಾಲಿಕೆಯು ಈ ಮನೆಗಳಿಗೆ ಖಾತಾ ನೀಡಲು ಅಭಿವೃದ್ಧಿ ಶುಲ್ಕವನ್ನು ನಿಗಧಿಪಡಿಸಿದೆಯೇ?